ದಿನಾಂಕಃ 04-08-2021.
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಎದುದಾರರ ಪರ ಶ್ರೀ ವೈ ಆರ್ ವಕೀಲರಿಂದಃ**

ಅರ್ಜಿದಾರರಾದ ಕೆ.ಲಕ್ಷ್ಮಯ್ಯನವರು ನನ್ನ ವಿರುದ್ದ ಅ.ದಾ.ಸಂಖ್ಯೆ 32/5 ನ್ನು ಅರ್ಜಿ ಷೆಡ್ಯೂಲ್ ಸ್ವತ್ತುಗಳಿಗಾಗಿ ಹೂಡಿದ್ದರು ಮತ್ತು ಅದು ಡಿಕ್ರಿಯಾಗಿದೆ ಎಂದರೆ ಸರಿ. ಆ ಡಿಕ್ರಿಯ ವಿರುದ್ದ ನಾನು ಹಿರಿಯ ಸಿವಿಲ್ ನ್ಯಾಯಾಲಯ , ಶಿರಾ ರವಲ್ಲಿ ಆರ್.ಎ.22/2010 ನ್ನು ಹೂಡಿದ್ದೆವು ಎಂದರೆ ಸರಿ. ಆ ಅಪೀಲು ವಜಾ ಆಗಿದೆ ಎಂದರೆ ಸರಿ. ಎರಡೂ ಪ್ರಕಾರಣಗಳಲ್ಲಿ ನಾವು ನ್ಯಾಯಾಲಯದ ಖರ್ಚನ್ನು ಕೊಡಬೇಕೆಂದು ಆದೇಶವಾಗಿತ್ತು. ಇಲ್ಲಿಯವರೆವಿಗೂ ನಾನು ಹಣವನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ ಆ ರೀತಿ ಆದೇಶ ಇಲ್ಲ ಆದ್ದರಿಂದ ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ಪ್ರಮಾಣಪತ್ರದಲ್ಲಿ ಹೇಳಿರುವಂತೆ ಅದಾ.ನಂ. 9/2010 , ಅ.ದಾ.ನಂ. 204/2009 ರ ತೀರ್ಪಿನ ಪ್ರತಿಯನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಸನಂ. ರಿಪೋರ್ಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನಾವು ಅ.ದಾ.ಸಂಖ್ಯೆ 32/5 ಮತ್ತು ಆರ್.ಎ.22/2010 ರ ವಿರುದ್ದ ಯಾವುದೇ ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಲ್ಲಿಸಿದ್ದೇನೆ ಎನ್ನುತ್ತಾರೆ. ನಾನು ಅ.ದಾ.ಸಂಖ್ಯೆಃ 9/2010 ಮತ್ತು ಆರ್.ಎ.15/2016 ರ ವಿರುದ್ದ ಸಲ್ಲಿಸಿದ ಮೇಲ್ಮನವಿಗಳ ಆದೇಶಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ನಿವೃತ್ತ ಉದ್ಯೋಗಾಧಿಕಾರಿ ಎಂದರೆ ಸರಿ. ನಾನು 35 ವರ್ಷ ಸೇವೆಯಲ್ಲಿದೆ.

ನನ್ನ ಪ್ರಮಾಣ ಪತ್ರದಲ್ಲಿ ನಾನು ನಿವೃತ್ತ ಉದ್ಯೋಗಾಧಿಕಾರಿ ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗದ ಬಗ್ಗೆ ಬರೆಸಿಲ್ಲ ಎಂದರೆ ಸರಿ. ಅ.ದಾ. ಸಂಖ್ಯೆ 32/2005 ಲಕ್ಷಯ್ಯನವರ ಪರವಾಗಿ ಡಿಕ್ರಿಯಾಗಿದ್ದರೂ ಸಹ ನಾವು ಅವರ ಸ್ವಾಧಿನಾನುಭವಕ್ಕೆ ತೊಂದರೆ ಮಾಡಿದ್ದರಿಂದ ಈ ಪ್ರಕರಣವನ್ನು ಹೂಡಿದ್ದಾರೆ ಎಂದರೆ ಸಾಕ್ಷಿ ನಾವು ತೊಂದರೆ ಮಾಡಿಲ್ಲ ಎನ್ನುತ್ತಾರೆ. ಅರ್ಜಿದಾರರು ತಮ್ಮ ಸ್ವತ್ತಿಗೆ ಬೇಲಿ ಹಾಕುವಾಗ ನಾವು ತೊಂದರೆ ಮಾಡಿದ್ದರಿಂದ ಈ ದಾವೆಯನ್ನು ಹೂಡಿದ್ದಾರೆ , ನಾವು ತೊಂದರೆ ಮಾಡಿಲ್ಲ ಎನ್ನುತ್ತಾರೆ. ನಾವು 1 ರಿಂದ 8 ನೇ ಎದುರುದಾರರು ಅರ್ಜಿದಾರರಿಗೆ ಅವರು ಸ್ವತ್ತಿಗೆ ಬೇಲಿಹಾಕುವಾಗ ತೊಂದರೆ ಕೊಟ್ಟಿದ್ದರಿಂದ ಈ ಪ್ರಕರಣವನ್ನು ಹೂಡಲಾಯಿತು ಎಂದರೆ ಸರಿಯಲ್ಲ. ದಿಃ 06-06-2013 ರಲ್ಲಿ ನಿಪಿ- 3 ರ ಪ್ರಕಾರ ನಾವು ಅರ್ಜಿದಾರರಿಗೆ ತೊಂದರೆ ನೀಡಿದ್ದರಿಂದ ಅವರು ಕಳ್ಳಂಬೆಳ್ಳ ಪೋಲಿಸ್ ಠಾಣೆಗೆ ನಮ್ಮ ವಿರುದ್ಧ ದೂರು ನೀಡಿದ್ದಾರೆ ಎಂದರೆ ಸರಿಯಲ್ಲ .

ನಾನು ಈ ಪ್ರಕರಣದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯೂಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.